ಆಕರ್ಷಕ ವಿನ್ಯಾಸ ಈ ಅರೇಬಿಕ್ ಶೈಲಿಯ ಮೆಹೆಂದಿಯದ್ದು. ಫ್ಲೋರಲ್ ಆರ್ಟ್‌ವರ್ಕ್ ಹಾಗೂ ಜಿಯೊಮೆಟ್ರಿಕ್ ಪ್ಯಾಟರ್ನ್‌ಗಳ ಮಿಶ್ರಣವನ್ನು ಇದು ಒಳಗೊಂಡಿದೆ. ಭಾರತೀಯ ಶೈಲಿಗಿಂತ ವಿಭಿನ್ನವಾಗಿದ್ದು ಯುವಮನಸ್ಸುಗಳು ಹೆಚ್ಚು ಇಷ್ಟ ಪಡುವ ವಿನ್ಯಾಸ ಇದಾಗಿದೆ.

## ಪಾಕಿಸ್ತಾನಿ ವಿನ್ಯಾಸ

ಪಾಕಿಸ್ತಾನಿ ಮದರಂಗಿ ವಿನ್ಯಾಸ ಹೆಚ್ಚು ಗಾಢ ಬಣ್ಣದಾಗಿರುತ್ತದೆ. ಕಪ್ಪು ಬಣ್ಣದ ಮದರಂಗಿಗೆ ಆದ್ಯತೆ. ಭಾರತೀಯ ಹಾಗೂ ಅರೇಬಿಕ್ ವಿನ್ಯಾಸದ ಮಿಶ್ರಣವಾಗಿರುವ ಇದು ಅತ್ಯಾಕರ್ಷಕ. ಬಗೆಬಗೆಯ ಹೂವಿನ ಚಿತ್ರವಿರುವ ಸರಳ ವಿನ್ಯಾಸ ಹೆಚ್ಚು ಜನಪ್ರಿಯವಾಗಿದೆ. ಬೆರಳುಗಳಿಗೆ ಉಂಗುರ ತೊಟ್ಟಂತೆ ಕಾಣುವ ವಿನ್ಯಾಸ, ಹಾರ್ಟ್ ಶೇಪ್ ಹೊಂದಿದ ಎಲೆಗಳ ವಿನ್ಯಾಸ, ವಿವಿಧ ಗಾತ್ರದ ಮಂಡಲ ಕಲಾಕೃತಿ, ವಕ್ರರೇಖೆ ಹಾಗೂ ಶೇಡ್‌ಗಳನ್ನು ಬಳಸಿ ರಚಿಸುವ ಚಿತ್ರಕೃತಿ, ಚಕ್ರದ ವಿನ್ಯಾಸ, ನವಿಲು, ವಿ ಶೇಪ್ ಮೆಹೆಂದಿಗಳು, ಬಣ್ಣ ಬಣ್ಣದ ಮೆಹೆಂದಿ, ಸಮಕಾಲೀನ ವಿನ್ಯಾಸ, ಜೆಮ್ ಸ್ಟೋನ್‌ಗಳನ್ನು ಬಳಸಿ ಮಾಡಲಾದ ವಿನ್ಯಾಸ, ಕಪಲ್ ಮೆಹೆಂದಿ ಹಾಗೂ ಸರಳ ಚಿತ್ರಗಳು ಹೀಗೆ ಕಲಾವಿದನ ಕೈಚಳಕದಲ್ಲಿ ವಿನ್ಯಾಸ ಬದಲಾಗುತ್ತ ಮದರಂಗಿ ಪ್ರಿಯರನ್ನು ಆಕರ್ಷಿಸುತ್ತದೆ.

## ಮೊಘಲ್ ಶೈಲಿ

ಆಕರ್ಷಕವಾದ ಹಾಗೂ ಭವ್ಯವಾದ ಕಲಾತ್ಮಕ ಕೈಕುಸುರಿ ಇಲ್ಲಿರುತ್ತದೆ. ಸಾಂಪ್ರದಾಯಿಕ ಶೈಲಿಯನ್ನು ಇಲ್ಲಿ ಬಳಸಲಾಗುತ್ತದೆ ಹಾಗೂ ಚಿಕ್ಕ ಚಿಕ್ಕ ವಿನ್ಯಾಸಗಳು ಹೆಚ್ಚಿರುತ್ತವೆ. ಅಲ್ಲದೆ ಪ್ರತಿ ಚಿತ್ರವೂ ಹೆಚ್ಚು ವಿವರಣಾತ್ಮಕವಾಗಿರುತ್ತದೆ. ಚುಕ್ಕೆಗಳು, ಸುರುಳಿಯಾಕಾರ, ನವಿಲು, ಕಮಲದ ಹೂವಿನ ವಿನ್ಯಾಸಕ್ಕೆ ವಿಶೇಷ ಆದ್ಯತೆ ಇದೆ.

## ಮೊರಕ್ಕನ್ ಶೈಲಿ

ಮೊರಕ್ಕನ್ ಶೈಲಿಯ ವಿನ್ಯಾಸ ಹೆಚ್ಚು ಸಮಕಾಲೀನವಾದುದು. ಸಾಂಪ್ರದಾಯಿಕ ಮೆಹೆಂದಿ ವಿನ್ಯಾಸದೊಂದಿಗೆ ಆಧುನಿಕ ಮೆರುಗಿನ ಲೇಪನ ಇದಕ್ಕಿದೆ. ವಿವಿಧ ವಿನ್ಯಾಸದ ಆಯತ, ಚೌಕ, ತ್ರಿಕೋನಾಕಾರಗಳನ್ನು ಬಳಸಿಕೊಂಡು ವಿನ್ಯಾಸ ಮಾಡಲಾಗುತ್ತದೆ. ಆಕರ್ಷಣೆಗೆಂದು ಇವುಗಳ ಮಧ್ಯೆ ಹೂವು, ಎಲೆ, ಚುಕ್ಕೆಗಳನ್ನೂ ಬಳಸಿಕೊಳ್ಳಲಾಗುತ್ತದೆ. ಹೊಸತನಕ್ಕೆ ಹಾತೊರೆಯುವ ಮನಸ್ಸಿನವರು ನೀವಾದರೆ ಮೊರಕ್ಕನ್ ವಿನ್ಯಾಸವನ್ನು ಒಮ್ಮೆ ಪ್ರಯತ್ನಿಸಬಹುದು.



## ಅಲಂಕಾರಕ್ಕೂ, ಆರೋಗ್ಯಕ್ಕೂ

ಲಾಸೋನಿಯ ಇನರ್ಮಿಸ್ ಎನ್ನುವುದು ಇದರ ಶಾಸ್ತ್ರೀಯ ನಾಮ. ಹೆನ್ನಾ ಇನ್ನೊಂದು ಹೆಸರು. ಇದರ ಎಲೆಗಳನ್ನು ಅಂಗೈ, ಮುಂಗಾಲು ಹಾಗೂ ಕೈಬೆರಳಿನ ಉಗುರುಗಳಿಗೆ ಬಣ್ಣವಾಗಿ ಬಳಸಲಾಗುತ್ತಿತ್ತು. ತಲೆಗೂದಲಿಗೆ ಬಣ್ಣ ನೀಡಲು ಉಪಯೋಗಿಸಲಾಗುತ್ತಿತ್ತು. ಅಲಂಕಾರಕ್ಕಷ್ಟೇ ಅಲ್ಲದೆ, ಔಷಧೀಯ ಗುಣ ವಿಪುಲವಾಗಿರುವದರಿಂದ ಆರೋಗ್ಯವರ್ಧಕವಾಗಿಯೂ ಬಳಸಲಾಗುತ್ತದೆ.

- ಇದರ ಕಷಾಯ ಗಂಟಲು ನೋವು ನಿವಾರಕ
- ಮೆಹೆಂದಿ ಎಣ್ಣೆಯನ್ನು ಸುಗಂಧ ದ್ರವ್ಯಕ್ಕೆ ಬಳಸಲಾಗುತ್ತದೆ. ಮೆಹೆಂದಿ ತಂಪುಕಾರಕ.

## ಮೆಹೆಂದಿ ಸ್ಟಾಂಪ್ಸ್

ತಾಸುಗಟ್ಟಲೆ ಕೂತು ಮೆಹೆಂದಿಯನ್ನು ಕೈಗೆ ಹಾಕಿಸಿಕೊಳ್ಳಬೇಕು. ಜೊತೆಗೆ ಅದು ಒಣಗುವವರೆಗೂ ಕಾಯಬೇಕು. ಮದರಂಗಿಯ ಬಣ್ಣ ಚರ್ಮದ ಮೇಲೆ ಗಾಢವಾಗಿ ಮೂಡಬೇಕಾದರೆ ಸಾಕಷ್ಟು ಸಮಯ ಕಾಯಬೇಕು. ಇಷ್ಟೆಲ್ಲಾ ಮಾಡುವ ತಾಳ್ಮೆ ಇಲ್ಲದವರಿಗೆ ಮೆಹೆಂದಿ ಸ್ಟಾಂಪ್ ಅತ್ಯುತ್ತಮ. ವಿವಿಧ ವಿನ್ಯಾಸದ ಮರದ ಅಚ್ಚು ಅಥವಾ ರಬ್ಬರ್ ಅಚ್ಚನ್ನು ಬಳಸಿ ಕೈಮೇಲೆ ಒತ್ತಲಾಗುತ್ತದೆ. ಇದು ಬೇಗ ಒಣಗುವುದಲ್ಲದೆ ನೋಡಲು ಸುಂದರವಾಗಿರುತ್ತದೆ.

## ಮದುವೆ ಮೆಹೆಂದಿ

ಮದುಮಗಳಿಗೆ ಮೆಹೆಂದಿ ಅತ್ಯಂತ ವಿಶೇಷ. ಬದುಕಿನ ಹೊಸ ಘಟ್ಟಕ್ಕೆ ಕಾಲಿಡುತ್ತಿರುವ ಹುಡುಗಿಗೆ ಮನಸಿನ ರಂಗು ಮೆಹೆಂದಿ ರೂಪದಲ್ಲಿ ಅರಳಿರುತ್ತದೆ. ಮೆಹೆಂದಿ ವಿನ್ಯಾಸದ ಚೆಲುವು ಮನಸ್ಸಿಗೆ ಮುದ ನೀಡುವುದರ ಜೊತೆಗೆ ಇದು ಧನಾತ್ಮಕ ಅಂಶಗಳನ್ನು ಹುಟ್ಟುಹಾಕುತ್ತದೆ.

## ಬೇಬಿ ಶವರ್

ಗರ್ಭಿಣಿ ಇರುವಾಗ ಬೇಬಿ ಶವರ್ ಹೆಸರಿನಲ್ಲಿ ಫೋಟೊಶೂಟ್ ಮಾಡಿಸುವುದು ಈಗಿನ ಟ್ರೆಂಡ್. ಈ ದಿನಕ್ಕಾಗಿ ಮದರಂಗಿ ಹಚ್ಚಿಸಿಕೊಳ್ಳುವ ಟ್ರೆಂಡ್ ಕೂಡ ಹೆಚ್ಚಾಗಿದೆ. ಮಾಲೂರಿನ ಮೆಹೆಂದಿ ಕಲಾವಿದ ಶಿವು ಹೇಳುವ ಪ್ರಕಾರ ನಿಶ್ಚಿತಾರ್ಥ, ಮದುವೆ, ಗೃಹ ಪ್ರವೇಶ, ಹುಟ್ಟುಹಬ್ಬ, ಮದುವೆ ವಾರ್ಷಿಕೋತ್ಸವಗಳಲ್ಲಿ ಹೆಚ್ಚಾಗಿ ಮೆಹೆಂದಿ ರಂಗು ಮೂಡಿಸುತ್ತಿದ್ದೆ. ಈಗ ಹೊಸದಾಗಿ ಬೇಬಿ ಶವರ್ ಕಾರ್ಯಕ್ರಮಕ್ಕೂ ಸಾಕಷ್ಟು ಆಹ್ವಾನ ಬರುತ್ತಿದೆ. ತೊಟ್ಟಿಲಲ್ಲಿ ಮಗು ಮಲಗಿರುವಂತೆ, ಶೂ ಚಿತ್ರ, ಬಟ್ಟೆಗಳ ಚಿತ್ರ, ಗಂಡ ಗರ್ಭಿಣಿ ಹೆಂಡತಿಯ ಹೊಟ್ಟೆ ಹಿಡಿದಿರುವಂತೆ, ಹೀಗೆ ಗರ್ಭಿಣಿ ಹಾಗೂ ಮಗುವಿಗೆ ಸಂಬಂಧಿಸಿದಂತೆ ವಿವಿಧ ರೀತಿಯಲ್ಲಿ ಮೆಹೆಂದಿ ಚಿತ್ರ ಬಿಡಿಸಿಕೊಟ್ಟಿದ್ದೇನೆ. ಇದು ಈಗ ಟ್ರೆಂಡ್ ಆಗಿದೆ.

## ವಿನ್ಯಾಸವೇ ಮುಖ್ಯ



ನಾವು ಎಲ್ಲ ಶೈಲಿಯ ಮೆಹೆಂದಿ ವಿನ್ಯಾಸ ಮಾಡಿಕೊಡುತ್ತೇವೆ. ಯಾರೂ ಇಂಥ ಶೈಲಿಯ ಮೆಹೆಂದಿಯನ್ನೇ ಹಾಕಿಕೊಡಿ ಎಂದು ಕೇಳುವುದಿಲ್ಲ. ಬದಲಾಗಿ ಅವರಿಗೆ ಇಷ್ಟವಾಗುವ ಡಿಸೈನ್‌ಗಳನ್ನು ಹಾಕಿಸಿಕೊಳ್ಳುತ್ತಾರೆ. ಅದರಲ್ಲೂ ಮುಖ್ಯವಾಗಿ ಪೋರ್ಟ್ರೇಟ್, ಫ್ಲೋರಲ್ ಜ್ಯುವೆಲ್ಲರಿ ಎಲಿಮೆಂಟ್ಸ್ ಹಾಗೂ ಜ್ಯುವೆಲ್ಲರಿ ಎಲಿಮೆಂಟ್ಸ್ ವಿನ್ಯಾಸಗಳಿಗೆ ಹೆಚ್ಚು ಬೇಡಿಕೆ ಇದೆ. ಎಲ್ಲ ರೀತಿಯ ಫಂಕ್ಷನ್‌ಗಳಲ್ಲಿ ಮೆಹೆಂದಿ ಹಾಕಿದ್ದೇವೆ. ಮದುಮಗಳಿಗೆ ಬ್ಲೌಸ್ ರೀತಿಯ ಮೆಹೆಂದಿಯನ್ನು ಕೂಡ ಹಾಕಿದ್ದೇವೆ. ಇದರ ಬಣ್ಣ ಹಾಗೂ ವಿನ್ಯಾಸ ವೈವಿಧ್ಯದ ಕಾರಣದಿಂದಲೇ ಮೆಹೆಂದಿಯನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಾರೆ. ದೇಹದ ಉಷ್ಣಾಂಶವನ್ನು ಕಡಿಮೆ ಮಾಡುವ ಶಕ್ತಿ ಇದಕ್ಕಿದೆ.

—ಸಪ್ನಾ ಜೈನ್
ಸೆಲೆಬ್ರಿಟಿ ಮೆಹೆಂದಿ ಕಲಾವಿದೆ